'ಕೃಷ್ಣ ರುಕ್ಮಿಣಿ' ಸಿನಿಮಾದ ಸಂಭಾಷಣೆಯ ಹಾಳೆ ನೋಡಿ, 'ಯಾರ್ರೀ... ಇಷ್ಟುದ್ದ ಬರೆದಿದ್ದಾರೆ' ಎಂದು ಕೇಳಿದ್ದರು. ಉಳಿದ ಪಾತ್ರಧಾರಿಗಳೆಲ್ಲ ತಮಗೆ ಸಂಭಾಷಣೆ ಹೇಳುವುದು ಕಷ್ಟವಾಗುತ್ತಿಲ್ಲ ಎಂದಮೇಲೆ ವಿಷ್ಣು ಕೂಡ ಕರಗಿದ್ದರು. ನಾನು ವಿಷ್ಣುವರ್ಧನ್‌ಗೆ ಮಾತ್ರ ರೀಡಿಂಗ್ ಕೊಡುತ್ತಾ ಇದ್ದೆ. ಅವರನ್ನು ಬಿಟ್ಟರೆ ಈಗ ದರ್ಶನ್‌ಗೆ ರೀಡಿಂಗ್ ಕೊಟ್ಟೆ.

ವಿಷ್ಣು ಹಾಗೂ ನನ್ನ ನಡುವೆ ರೀಡಿಂಗ್ ಕೊಡಲೇಬೇಕು ಎಂಬ ಅಲಿಖಿತ ಒಪ್ಪಂದವಾಗಿತ್ತು. ಎಸ್. ನಾರಾಯಣ್ ತರಹದ ನಿರ್ದೇಶಕರು 'ವೀರಪ್ಪನಾಯ್ಕ' ಸಿನಿಮಾ ಮಾಡಿದಾಗ, ಅದಕ್ಕೂ ವಿಷ್ಣು ಹಟಕ್ಕೆ ಬಿದ್ದು ನನ್ನಿಂದಲೇ ಸಂಭಾಷಣೆ ಬರೆಸಿದರು. ಆಗ ಅಪಘಾತದಿಂದ ನನ್ನ ಬಲಗೈ ಮೂಳೆಗಳು ಮುರಿದಿದ್ದವು. ಮುಂಗೈ ಚಲನೆಯೇ ಇರಲಿಲ್ಲ. ಆದರೂ ಎಡಗೈಲಿ ಬರೆದು ಕೆಲಸ ಮುಗಿಸಿಕೊಟ್ಟಿದ್ದೆ. 'ದೇವ' ಸಿನಿಮಾದಲ್ಲಿ ಮದಕರಿನಾಯಕನ ನಾಟಕ ಪ್ರಸಂಗವನ್ನು ನಟಿಸಲೂ ವಿಷ್ಣು ಅವರನ್ನು ಒಪ್ಪಿಸಲು ಹೆಣಗಾಡಿದ್ದೆವು. ಮೊದಲು ಸಾಹಿತಿಗಳ ಸಹವಾಸ ಬೇಡ ಎಂದಿದ್ದ ವಿಷ್ಣು ಆಮೇಲೆ ನನಗೆ ಹತ್ತಿರವಾದದ್ದು ಹೀಗೆ.

◆ **ಅಂಬರೀಷ್‌ಗೆ ರೀಡಿಂಗ್ ಕೊಡುತ್ತಾ ಇರಲಿಲ್ವಾ?**

ಅಂಬರೀಷ್ ವ್ಯಕ್ತಿತ್ವವೇ ಬೇರೆ. ಅವರಿಗೆ ನಂಬಿಕೆ ಬಂದರೆ ಮುಗಿಯಿತು. ನಾನು ಸಂಭಾಷಣೆ ಬರೆದಿರುವೆ ಎಂದರೆ, ಅವರು ಬೇರೆ ಏನನ್ನೂ ಪ್ರಶ್ನಿಸುತ್ತಲೇ ಇರಲಿಲ್ಲ. ಡಿ. ರಾಜೇಂದ್ರ ಬಾಬು 'ಒಲವಿನ ಉಡುಗೊರೆ' ಸಿನಿಮಾಗೆ ಒಂದು ಥ್ರೆಡ್ ಹೇಳಿದರು. ಅದನ್ನು ನಾನು ಬೆಳೆಸಿದೆ. ನಾನು ಕೈ ಕೊಯ್ದುಕೊಂಡು, ರಕ್ತದಲ್ಲಿ ಪ್ರೇಮಪತ್ರ ಬರೆದಿದ್ದ ಸನ್ನಿವೇಶವನ್ನು ಬರೆದಿದ್ದೆ. ಅದನ್ನು ಓದುವ ನಾಯಕಿ, 'ರಕ್ತವನ್ನ ದಾನ ಮಾಡಬಹುದಿತ್ತು' ಎನ್ನುವ ಡೈಲಾಗ್ ಇತ್ತು. ಅದನ್ನು ಓದಿ, ಆ ಕಾಲದಲ್ಲಿ ಅವರೆಲ್ಲರಿಗೆ ಆಶ್ಚರ್ಯ. ಅಂಬರೀಷ್ ಕೇಳಿಯೇಬಿಟ್ಟರು – ಕೈ ಕೊಯ್ದುಕೊಂಡು ಹೀಗೆ ಬರೆಯಲು ಸಾಧ್ಯವಾ ಎಂದು. ನಾನು ನನ್ನ ಕೈಮೇಲೆ ಇದ್ದ ಮಾರ್ಕುಗಳನ್ನು ತೋರಿಸಿದ್ದೆ. ಕ್ಲೈಮ್ಯಾಕ್ಸ್ ಶೂಟಿಂಗ್ ಹತ್ತಿರವಾದಾಗ ಅಂಬಿಗೆ ಕೋಪ. ಮುಖ ಅರ್ಧ ಸುಟ್ಟಿರುವ ನಾಯಕನಾಗಿ ಅವರು ಬದಲಾಗಬೇಕಿತ್ತು. 'ಈ ಮುಖವನ್ನೇ ನೋಡಲ್ಲ; ಇನ್ನು ಅರ್ಧ ಸುಟ್ಟರೆ ಯಾರು ನೋಡ್ತಾರೆ?' ಎಂದು ಕೇಳಿದರು. ಕೊನೆಗೆ ರಾಜೇಂದ್ರ ಬಾಬು ಒಂದೇ ಸಲ ಒಂದು ಕೋನದಿಂದ ಮಾತ್ರ ತೋರಿಸಿ ಚಿತ್ರೀಕರಿಸುವುದಾಗಿ ಅವರನ್ನು ಒಪ್ಪಿಸಿದರು.

◆ **ದೊರೆ–ಭಗವಾನ್ ನಿಮ್ಮನ್ನು ದುಡಿಸಿಕೊಂಡರಲ್ಲವೇ?**

ಹೌದು. ಪುಟ್ಟಣ್ಣ, ಸಿದ್ದಲಿಂಗಯ್ಯ ಅವರ ಬಗೆಗೇ ನಾವು ಹೆಚ್ಚಾಗಿ ಮಾತನಾಡುತ್ತೇವೆ. ಆದರೆ, ದೊರೆ–ಭಗವಾನ್ ಅದೆಷ್ಟೋ ಹಿಟ್ ಚಿತ್ರಗಳನ್ನು ಕೊಟ್ಟವರು. ಅವರ ಬಳಿ ಕೆಲಸ ಮಾಡುವಷ್ಟರಲ್ಲಿ ನನ್ನ ಆತ್ಮವಿಶ್ವಾಸ ಹೆಚ್ಚಾಗಿತ್ತು. ಸಿದ್ದಲಿಂಗಯ್ಯ ಹಾಗೂ ಪುಟ್ಟಣ್ಣನವರ ಗರಡಿಯಲ್ಲಿ ನಾನು ಗಿಟ್ಟಿಸಿಕೊಂಡ ಆತ್ಮವಿಶ್ವಾಸ ಅದು. ರಾಜ್‌ಕುಮಾರ್ ಇಲ್ಲದೆಯೂ ನೂರು ದಿನ ಓಡುವಂಥ ಸಿನಿಮಾಗಳನ್ನು ಅವರೊಟ್ಟಿಗೆ ನಾವು ಕೊಟ್ಟಂತಹ ಹೆಮ್ಮೆ ಇದೆ.

◆ **ನಿಮ್ಮ ಬರವಣಿಗೆಯಲ್ಲಿ ಬಾಲ್ಯದ ಕಾಣ್ಕೆಯೇನಾದರೂ ಇದೆಯೇ?**

ಚಿತ್ರದುರ್ಗದ ಕರುವಿನಕಟ್ಟೆಯಲ್ಲಿ ಜಾನಪದದ ನಡುವೆ ನಾನು ಬೆಳೆದೆ. ಅಷ್ಟದುರ್ಗಿಯರು, ಅಷ್ಟಮಠಗಳ ಊರು ನಮ್ಮದು. ದೇವರು, ದೆವ್ವಗಳನ್ನು ಬಿಡಿಸುತ್ತಿದ್ದರು. ಬೆಟ್ಟಕ್ಕೆ ಹೋಗಿ ಸ್ನಾನ ಮಾಡಿ ಬರುತ್ತಿದ್ದೆ. ಮೌಢ್ಯ, ಕಂದಾಚಾರ, ಜಾತೀಯತೆ ಬಗೆಗೆ ನನಗೆ ಮೊದಲಿನಿಂದ ದ್ವೇಷ.